**ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಎಂ ನಾಗರಾಜು ಇವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಉತ್ತರ**

**ಪ್ರಶ್ನೆ:-**

ವಯೋವೃದ್ಧ ತಂದೆ-ತಾಯಂದಿರನ್ನು ಹೆತ್ತ ಮಕ್ಕಳೇ ಮನೆಯಿಂದ ಹೊರ ಹಾಕುತ್ತಿದ್ದು, ಹಿರಿಯ ಜೀವಿಗಳಿಗೆ ಬೆಳಗಾವಿ ವೈದ್ಯಕೀಯ ವಿಜ್ಞಾನ ಸಂಸ್ಥೆ (ಬಿಮ್ಸ್)ಯ ಆಸ್ಪತ್ರೆಯೇ ಈಗ ಆಸರೆ ಆಗಿದೆ. ವೃದ್ಧಾಪ್ಯದ ವೇಳೆ ಮಕ್ಕಳ ಆರೈಕೆಯಲ್ಲಿ ಜೀವನದ ಕೊನೆಯ ದಿನ ಕಳೆಯಬೇಕಾದ ಹಿರಿಯ ಜೀವಿಗಳು ಅಕ್ಷರಶಃ ಅನಾಥರಾಗುತ್ತಿದ್ದಾರೆ. ಅನಾರೋಗ್ಯದ ನೆಪ ಮಾಡಿಕೊಂಡು ಬೆಳಗಾವಿ ಬಿಮ್ಸ್ ಆಸ್ಪತ್ರೆ ಪೋಷಕರನ್ನು ದಾಖಲಿಸಿ ಹೋದ ಮಕ್ಕಳು ಮತ್ತೆ ಮರಳಿ ತಲೆ ಹಾಕುತ್ತಿಲ್ಲ.

ಆರೋಗ್ಯದಿಂದ ಗುಣಮುಖರಾದ ಮೇಲೂ ಮಕ್ಕಳು ಪೋಷಕರನ್ನು ಕರೆದುಕೊಂಡು ಹೋಗುವುದಿಲ್ಲ. ಕಳೆದ 2 ವರ್ಷದಲ್ಲಿ ಬರೋಬ್ಬರಿ 152 ವೃದ್ಧರಿಗೆ ಈ ಆಸ್ಪತ್ರೆಯು ಆಶ್ರಯ ತಾಣವಾಗಿರುತ್ತದೆ" ಎಂದು ದಿನಪತ್ರಿಕೆಯಲ್ಲಿ ಪ್ರಕಟವಾಗಿದ್ದು, ಈ ಕುರಿತು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿಗಳು ಕ್ರಮ ಕೈಗೊಳ್ಳಲು ಸೂಕ್ತ ನಿರ್ದೇಶನ ನೀಡಲು ಕೋರಿರುತ್ತಾರೆ.

**ಉತ್ತರ:-**

ಬೆಳಗಾವಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಸರ್ಕಾರಿ ಆಸ್ಪತ್ರೆಯಲ್ಲಿ ಕಳೆದ 2 ವರ್ಷಗಳಲ್ಲಿ ನಿರ್ಗತಿಕ ವಯೋವೃದ ರೋಗಿಗಳು ಸೇರಿದಂತೆ ದಾಖಲಾದ ಒಟ್ಟು ರೋಗಿಗಳ ಪೈಕಿ 152 ವಯೋವೃದ ರೋಗಿಗಳು ಈ ಆಸ್ಪತ್ರೆಯಿಂದ ಡಿಸ್ಚಾರ್ಜ್ ಆಗಿರುತ್ತಾರೆ.

90 ರೋಗಿಗಳನ್ನು (ಕರ್ನಾಟಕದಿಂದ 73 ಮತ್ತು ಹೊರ ರಾಜ್ಯಗಳಿಂದ 17) ತಮ್ಮ ತಮ್ಮ ಮನೆಗಳಿಗೆ ಮರಳಿಸಲಾಗಿದೆ. ಉಳಿದ 62 ವಯೋವೃದ್ಧರನ್ನು ಜಿಲ್ಲಾಡಳಿತ ಸಹಾಯದಿಂದ ವಿವಿಧ ವೃದ್ಧಾಶ್ರಮಗಳಿಗೆ ಕಳುಹಿಸಲಾಗಿದೆ. ಇದರಲ್ಲಿ ಕೆಲವು ವಯೋವೃದ್ಧರಿಗೆ ಮಕ್ಕಳು ಹಾಗೂ ಸಂಬಂಧಿಕರು ಇದ್ದರೂ ಸಹ ಯಾವುದೇ ಪ್ರತಿಕ್ರಿಯೆ ನೀಡಿರುವುದಿಲ್ಲ.

ಪ್ರಸ್ತುತ 18 ವಯೋವೃದ್ಧ ರೋಗಿಗಳು ಗುಣಮುಖರಾಗಿದ್ದರೂ ಡಿಸ್ಚಾರ್ಜ್ ಹೊಂದದೇ ಆಸ್ಪತ್ರೆಯಲ್ಲಿ ಇರುತ್ತಾರೆ. ಇವರ ಸಂಬಂಧಿಕರನ್ನು ಹುಡುಕುವ ಹಾಗೂ ವಾರಸುದಾರರಿಗೆ ಹಸ್ತಾಂತರಿಸುವ ಕುರಿತು ಜಿಲ್ಲಾಡಳಿತದೊಂದಿಗೆ ಸಮನ್ವಯ ಸಾಧಿಸುವ ಬಗ್ಗೆ ಯೋಜಿಸಿದ್ದು, ಈ ಕಾರ್ಯ ಚಾಲ್ತಿಯಲ್ಲಿದೆ.

**ಸಂಖ್ಯೆ:** ಎಂಇಡಿ 131 ಎಂಎಂಸಿ 2025

**(ಡಾ. ಶರಣಪ್ರಕಾಶ ಆರ್.ಪಾಟೀಲ್)**
ವೈದ್ಯಕೀಯ ಶಿಕ್ಷಣ ಹಾಗೂ
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು
ಜೀವನೋಪಾಯ ಸಚಿವರು